**ಓ.ಎಸ್.ನಂ. 328/2021**

**ಡಿ.ಡಬ್ಲ್ಯು: 1**

ದಿನಾಂಕಃ 25-09-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಎಮ್ ಎನ್ ವಾದಿ ಪರ ವಕೀಲರಿಂದಃ-</u>**

ನಾನು ಅನನ್ಯ ಮತ್ತು ಆದಿತ್ಯ ಸಂಸ್ಥೆಯನ್ನು ನಿರ್ವಹಣೆ ಮಡುತ್ತೇನೆ ಎಂದರೆ ಸರಿ. ನಾನು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದು ನನ್ನ ಹೆಂಡತಿಯಾದ 2 ನೇ ಪ್ರತಿವಾದಿ ಸುಮತಿ ಕುಮಾರ್ ರವರು ಡೈರೆಕ್ಟರ್ ಆಗಿರುತ್ತಾರೆ ಎಂದರೆ ಸರಿ. ನಮ್ಮ ಸಂಸ್ಥೆ ಕಡೂರಿನ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ ಇರುತ್ತದೆ ಎಂದರೆ ಸರಿ. ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದ ಹತ್ತಿರ ನನಗೆ ಸೇರಿದ 7-8 ಮಳಿಗೆಗಳು ಇರುತ್ತವೆ. ಸದರಿ ಮಳಿಗೆಗಳು ವಾಣಿಜ್ಯ ಮಳಿಗೆಗಳು ಎಂದರೆ ಸರಿ. ಸದರಿ ಮಳಿಗೆಗಳನ್ನು ಬೇರೆ ಬೇರೆ ಜನರಿಗೆ ಬೇರೆ ಬೇರೆ ವಾಣಿಜ್ಯ ಮತ್ತು ವ್ಯಾಪಾರ ವ್ಯವಹಾರ ನಡೆಸಲು ಬಾಡಿಗೆಗೆ ನೀಡಿರುತ್ತೇನೆ ಎಂದರೆ ಸರಿ. ಈ ರೀತಿ ಬಾಡಿಗೆಗೆ ನೀಡುವಾಗ ಸದರಿಯವರೊಂದಿಗೆ ಒಪ್ಪಂದದ ಕರಾರು ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿ. ಸದರಿ ಮಳಿಗೆಗಳಲ್ಲಿ ನಾನು ಒಪ್ಪಂದ ಕರಾರು ಪತ್ರವನ್ನು ಮಾಡಿಕೊಟ್ಟ ನಂತರ ವ್ಯಾಪಾರ ವ್ಯವಹಾರಗಳನ್ನು ಮಾಡಲು ಅವರುಗಳು ಅವರ ಹೆಸರಿನಲ್ಲಿ ಲೈಸೆನ್ಸ್ ಪಡೆದು ವಾಣಿಜ್ಯ ವ್ಯವಹಾರ ನಡೆಸುತ್ತಾರೆ ಎಂದರೆ ಸರಿ. ನಮ್ಮ ಸಂಸ್ಥೆ ನೊಂದಣೀಕೃತ ಸಂಸ್ಥೆ ಎಂದರೆ ಸರಿ. ನಮ್ಮ ಮಗಳಿಗೆಗಳು ಕಡೂರು ನಗರದ ವಾರ್ಡ್ ನಂ. 11 ರಲ್ಲಿ ಬರುತ್ತವೆ ಎಂದರೆ ಸರಿ. ನನ್ನ ಮಳಿಗೆಗಳ ಪಕ್ಕದಲ್ಲಿ ನನಗೆ ಸೇರಿದ ನಕ್ಷತ ಬಾರ್ ಅಂಡ್ ರೆಸ್ಟೋರೆಂಟ್ ಇರುತ್ತದೆ ಎಂದರೆ ಸರಿ. 1920-21 ರಲ್ಲಿ ವಾದಿಯ ಹೆಸರಿನಲ್ಲಿ ನಕ್ಷತ ಬಾರ್ ಅಂಡ್ ರೆಸ್ಟೋರೆಂಟ್ ನಡೆಸಲು ಕಡೂರು ಪುರಸಭಾ ಅಧಿಕಾರಿಗಳು ಲೈಸೆನ್ ಅನ್ನು ನೀಡಿರುತ್ತಾರೆ ಎಂದರೆ ಮೋಸದಿಂದ ಮಾಡಿಸಿಕೊಂಡಿರಬಹುದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಕಡೂರಿನ ಪುರಸಭಾ ಅಧಿಕಾರಿಗಳು ಯಾವುದೇ ಲೈಸೆನ್ಸ್ ವಿಚಾರವಾಗಿ ಒಂದು ಮಳಿಗೆಗೆ ಸಂಬಂಧಿದಂತೆ ಮಾಲೀಕರಿಂದ ಕರಾರುಪತ್ರವನ್ನು ಮಾಡಿಕೊಂಡ ನಂತರ ಲೈಸೆನ್ಸ್ ವಿತರಿಸುತ್ತಾರೆ ಎಂದರೆ ಸರಿ. ಪುರಸಭಾ ಅಧಿಕಾರಿಗಳು ಲೈಸೆನ್ಸ್ ಕೊಡುವ ಮುಂಚೆ ಲೈಸೆನ್ಸ್ ಶುಲ್ಕವನ್ನು ಕಟ್ಟಿಸಿಕೊಂಡು ನಂತರ ಲೈಸೆನ್ಸ್ ವಿತರಿಸುತ್ತಾರೆ ಎಂದರೆ ಸರಿ. ಪುರಸಭೆಯವರು ಸಾಮಾನ್ಯವಾಗಿ ಆಕ್ಸಿಸ್ ಬ್ಯಾಂಕಿನಲ್ಲಿ ವ್ಯವಹಾರ ನಡೆಸುತ್ತಾರೆ ಎಂದರೆ, ಸಾಕ್ಷಿಯು ಈ ಬ್ಯಾಂಕಿನಲ್ಲಿ ಅಲ್ಲದೇ ಇತರೆ ಬ್ಯಾಂಕಿನಲ್ಲೂ ವ್ಯವಹಾರ ನಡೆಸುತ್ತಾರೆ ಎಂದು ನುಡಿಯುತ್ತಾರೆ. ಪುರಸಭೆಯವರು ಸಾಮಾನ್ಯವಾಗಿ ಲೈಸೆನ್ಸ್ ನೀಡುವ ಮೊದಲು ಅಥವಾ ಲೈಸೆನ್ಸ್ ಅನ್ನು ರಿನೀವಲ್ ಮಾಡುವ ಮೊದಲು ಶುಲ್ಕವನ್ನು ಪಾವತಿಸಿಕೊಂಡು ನಂತರ ಲೈಸೆನ್ಸ್ ಅನ್ನು ನೀಡುತ್ತಾರೆ ಎಂದರೆ ಸರಿ.

ದಾವಾ ಆಸ್ತಿಗಳು  ನಮ್ಮ ಸಂಸ್ದೆಗೆ ಸೇರಿದ ಆಸ್ತಿಗಳು ಎಂದರೆ ಸರಿ.  ದಿಃ 26-12-2018 ರಂದು ನಮ್ಮ ಸಂಸ್ದೆಗೆ ಸೇರಿದ 2 ಮಳಿಗೆಗಳನ್ನು ನಾನು ಮತ್ತು 2 ನೇ ಪ್ರತಿವಾದಿಯು ಸೇರಿ ವಾದಿಗೆ ನಕ್ಷತ ಬಾರ್ ಅಂಡ್ ರೆಸ್ಟೂರೆಂಟ್ ಗೆ  ಬಾಡಿಗೆ ಕರಾರುಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ನಾನು ಮತ್ತು 2 ನೇ ಪ್ರತಿವಾದಿ ಸೇರಿ  ನಕ್ಷತ ಬಾರ್ ಅಂಡ್ ರೆಸ್ಟೂರೆಂಟ್ ಅನ್ನು ನಡೆಸಲು ಪ್ರತಿ ತಿಂಗಳಿಗೆ ರೂ.1,60,000/- ರಂತೆ ಬಾಡಿಗೆಗೆ ನೀಡಿದ್ದು ಮುಂಗಡವಾಗಿ ರೂ.20,00,000/- ಹಣವನ್ನು ತೆಗೆದುಕೊಂಡು  ವಾದಿಗೆ ಬಾಡಿಗೆಗೆ ಕರಾರು ಪತ್ರ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಗೆ ತನ್ನ ಪ್ರತಿವಾದಿ ಪತ್ರ ತೋರಿಸಿ ಅದರಲ್ಲಿರುವ ಸಹಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿಯು ಸದರಿ ಸಹಿಯು ತನ್ನದೆಂದು ಒಪ್ಪಿರುತ್ತಾರೆ. ವಕಾಲತ್ ನಾಮದಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ತನ್ನದೆಂದು ಒಪ್ಪಿರುತ್ತಾರೆ. ಸಾಕ್ಷಿಗೆ ವಾದಿಗೆ ಬರೆದುಕೊಟ್ಟ ಕರಾರುಪತ್ರದ ನೋಟರಿ ದೃಢೀಕೃತ ನಕಲನ್ನು ತೋರಿಸಿ ತಮ್ಮ ಸಹಿಯ ಬಗ್ಗೆ ಕೇಳಲಾಗಿ ಸಾಕ್ಷಿಯು ತನ್ನ ಸಹಿಯ ಬಗ್ಗೆ ತನ್ನದಲ್ಲ ಎಂದು ಅಲ್ಲಗಳೆದಿರುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ವಾದಿಗೆ ಬರೆದುಕೊಟ್ಟ ಕರಾರುಪತ್ರದ ಆದಾರದ ಮೇಲೆ ಕಡೂರಿನ ಪುರಸಭೆಯವರು ಬಾರ್ ಅಂಡ್ ರೆಸ್ಟೂರೆಂಟ್ ನಡೆಸಲು ವಾದಿಗೆ ಲೈಸೆನ್ಸ್ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದಿಗೆ ನೀಡಿರುವ ಲೈಸೆನ್ಸ್ ಅನ್ನು ತೋರಿಸಿ ಅದರಲ್ಲಿರುವ ಪೋಟವನ್ನು ವಾದಿಯದೆಂದು  ಕೇಳಲಾಗಿ ಸಾಕ್ಷಿಯು ವಾದಿಯ ಪೋಟೋವನ್ನು ಮಾತ್ರ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಮಾನ್ಯವಾಗಿ ಯಾವುದೇ ಬಾರ್ ಅಂಡ್ ರೆಸ್ಟೊರೆಂಟ್  ನಡೆಸಲು ಅಬಕಾರಿ ಇಲಾಖೆಗೆ ಅರ್ಜಿ ನೀಡಬೇಕು ಎಂದರೆ ಸರಿ. ನಮ್ಮ ಸಂಸ್ಥೆಯ ಮೂಲಕ ಬಾಡಿಗೆಗೆ ಪಡೆದ ಮಳಿಗೆಗೆ ಸಂಬಂಧಿದಂತೆ ಬಾರ್ ಅಂಡ್ ರೆಸ್ಟೋರೆಂಟ್ ಅನ್ನು ನಡಸೆಲು ಲೈಸೆನ್ಸ್ ಪಡೆಯಲು ಬಾಡಿಗೆದಾರನು ನಮ್ಮ ಸಂಸ್ಥೆಯ ಮೂಲ ದಾಖಲಾತಿ ( extract) ಯನ್ನು ನೀಡಬೇಕಾಗುತ್ತದೆ ಎಂದರೆ ಸರಿ. ಸಾಕ್ಷಿಗೆ ನಮ್ಮ ಸಂಸ್ಥೆಗೆ ಸೇರಿದ ಡೈರಕ್ಟರ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಗೆ ಸಂಬಂಧಿಸಿದ ಮೂಲ ದಾಖಲಾತಿಯನ್ನು ತೋರಿಸಿ ಕೇಳಲಾಗಿ ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ನಮ್ಮ ಮಳಿಗೆಗೆ ಸಂಬಂಧಿಸಿದಂತೆ ಬಾರ್ ಅಂಡ್ ರೆಸ್ಟೋರೆಂಟ್ ಮತ್ತು ಇತರೇ ಯಾವುದೇ ಲೈಸೆನ್ಸ್ ಅನ್ನು ಪಡೆಯಬೇಕಾದರೆ ನಿಪಿ-2 ರ ಮೂಲ ದಾಖಲಾತಿ ಕೊಟ್ಟು ನಂತರ ಪಡೆಯಬೇಕಾಗುತ್ತದೆ ಎಂದರೆ ಸರಿ. ಮುನಿಸಿಪಾಲಿಟಿಯಲ್ಲಾಗಲೀ ಅಥವಾ ಅಬಕಾರಿ ಇಲಾಖೆಯಲ್ಲಾಗಲೀ ಯಾವುದೇ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿ ಪರವಾನಗಿಯನ್ನು ಪಡೆಯಲು ನಮ್ಮ ಸಂಸ್ಥೆಯ ಮೂಲ ದಾಖಲಾತಿಯ ಆದಾರದ ಮೇಲೆ ನಮ್ಮ ಮಳಿಗೆಯಲ್ಲಿ ಬಾಡಿಗೆಗೆ ಇದ್ದವರಿಗೆ ಲೈಸೆನ್ಸ್ ಅನ್ನು ನೀಡುತ್ತಾರೆ ಎಂದರೆ ಸರಿ. ಮುನಿಸಿಪಾಲಿಟಿಯವರಾಗಲೀ ಅಥವಾ  ಅಬಕಾರಿ ಇಲಾಖೆಯವರು ಲೈಸೆನ್ಸ್ ನೀಡುವ ಮಾದಲು ಇಂತಿಷ್ಟು ಹಣವನ್ನು ಶುಲ್ಕವಾಗಿ ಪಾವತಿಸುವಂತೆ ನಿರ್ದೇಶನ ನೀಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲೆ ಯನ್ನು ತೋರಿಸಿ ಮನಿಸಿಪಾಲಿಟಿಯವರು ಲೈಸೆನ್ಸ್ ನೀಡುವ ಮುನ್ನ ಶುಲ್ಕ ಕಟ್ಟಿಸಿಕೊಂಡು

ರಶೀದಿ ನೀಡುತ್ತಾರೆ ಎಂದರೆ ಸರಿ. ಆದರೆ ಸಾಕ್ಷಿಯು ರಶೀದಿಯು ನಮ್ಮ ಮಳಿಗೆಗೆ ಸಂಬಂಧಿಸಿದ್ದು ಅಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ನಮಗೆ ಸೇರಿದ ಇ-ಸ್ವತ್ತು ಆಗಿರುತ್ತದೆ ಎಂದು ಸಾಕ್ಷಿ ಒಪ್ಪಿದ್ದರಿಂದ ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿಯೇ ನಮ್ಮ ಮಳಿಗೆಗಳು ಇರುತ್ತವೆ ಎಂದರೆ ಸರಿ.

**(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ನೀಡಲಾಯಿತು)**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

***2 ನೇ.ಹೆ.ಪ್ರ:ದ:ನ್ಯಾ:ದಂ., ರವರು,***
***ಕಡೂರು.***